# ಅಂದಿನ ‘ಸ್ಟಾರ್’ ಪಾರ್ಟಿ

‘ಮೂವತ್ತು ಸಿನಿಮಾಗಳಲ್ಲಿ ನಟಿಸಿದ ಮೇಲೆಯೂ ನಿರ್ಮಾಪಕರ ಮನೆ ಮುಂದೆ ಭಿಕ್ಷುಕರಂತೆ ಸಂಭಾವನೆಗಾಗಿ ಕಾದು, ಅವರು ಹಣ ಕೊಟ್ಟ ತಕ್ಷಣ ರೇಷನ್ ಅಂಗಡಿ ಮುಂದೆ ಅಕ್ಕಿ ಸೀಮೆಎಣ್ಣೆಗೆ ಕ್ಯೂ ನಿಂತವರು ನಾವು! ಇಂದು ಎರಡು ಸಿನಿಮಾಗೆ ಕುಬೇರನ ಮಕ್ಕಳು! ಇದು ಹೇಗೆ ಎಂದು 57 ವರ್ಷ ವಯಸ್ಸಾದ ನಂತರವೂ ನನಗೆ ಅರ್ಥವಾಗುತ್ತಿಲ್ಲ. ಇದೇ, 2015ರಿಂದ ಮೋಜು ಮಸ್ತಿ ಕುಸ್ತಿ ಸಿನಿಮಾ ಜೀವನ! ಅಂದು ಒಂದು ಮಾತಿಗೆ ಅಳುತ್ತಿದ್ದೆವು. ಇಂದು...’

ಅರ್ಧ ಉದ್ಗಾರವೊಂದು ಪೂರ್ತಿ ಅರ್ಥವನ್ನು ಬಿಟ್ಟುಕೊಟ್ಟು ಮುಗಿದು ಹೋದ ಹಾಗೆ ತೋಚುವ ಈ ಮಾತುಗಳು, ಚಿತ್ರನಟ ಜಗ್ಗೇಶ್ ಇತ್ತೀಚೆಗೆ ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದ್ದು.

ಹಳೆಯ ನಟರು ಹೀಗೆ ‘ತಮ್ಮ ಕಾಲವೇ ಚಂದಿತ್ತು; ಈಗ ಲೋಕ ಕೆಟ್ಟಿದೆ’ ಎಂಬ ಹಳಹಳಿಕೆಯಲ್ಲಿ ಮುಳುಗಿಹೋಗುವುದು ಹೊಸದೇನಲ್ಲ. ಅದು ಪೂರ್ತಿ ಸತ್ಯವೂ ಅಲ್ಲ. ಆದರೆ ಜಗ್ಗೇಶ್ ಅವರ ಈ ಮಾತುಗಳು ಈಗ ಹೊಸದೇ ಅರ್ಥಗಳನ್ನು ಬಿಟ್ಟುಕೊಡುತ್ತ ಜ್ವಲಿಸುತ್ತಿದೆ. ಇದು ಬರೀ ಹಳತು ಹೊಸತುಗಳ ಹಳವಂಡವಷ್ಟೇ ಅಲ್ಲ; ಹಲವು ಕವಲುಗಳಲ್ಲಿ ಚಿಗುರಿಕೊಂಡಿರುವ, ಗೂಢ ಭೂಗರ್ಭದಲ್ಲಿ ಹರಡಿಕೊಂಡಿರುವ ರೋಗದ ಲಕ್ಷಣ ಮತ್ತು ಅದರ ಕಾರಣಗಳ ಜಟಿಲ ಗುಟ್ಟನ್ನು ತನ್ನೊಳಗೆ ಇರಿಸಿಕೊಂಡಿರುವ ಒಗಟಿನಂತೆಯೂ ಕಾಣಿಸುತ್ತದೆ.

ಯಾಕೆಂದರೆ ಈಗಿನ ಸಂದರ್ಭವೇ ಹಾಗಿದೆ! ಈ ಒಗಟನ್ನು ಬಿಡಿಸಲು ಸಾಧ್ಯವೇ ಎಂದು ಮುಂದೆ ನೋಡೋಣ. ಅದಕ್ಕೂ ಮೊದಲು ಈ ಮಾತಿನಲ್ಲಿ ಪರೋಕ್ಷವಾಗಿ ಬಿಂಬಿತವಾಗಿರುವ ‘ಆ ಕಾಲ’ದ ವಾಸ್ತವ ಹೇಗಿತ್ತು ಎಂಬುದರ ಸಣ್ಣ ಝಲಕ್ ಒಂದನ್ನು ಮಿಂಚಿಸಿಕೊಂಡು ಬರೋಣ.

***

ಅದು ‘ಆ ಕಾಲ’. ನಗರದ ಹೊರವಲಯದ ತೋಟದ ಮನೆಯೊಂದರಲ್ಲಿ ನಡೆಯುತ್ತಿರುವ ಸಿನಿಮಾ ಪತ್ರಿಕಾಗೋಷ್ಠಿ. ಸಿನಿಮಾದ ಶೀರ್ಷಿಕೆಯಲ್ಲಿ ಸೂರ್ಯನ ಹುಟ್ಟಿನ ಸೂಚನೆ ಇದ್ದರೂ, ಸಿನಿಮಾ ಪತ್ರಿಕಾಗೋಷ್ಠಿಗೆ ಯಾವಾಗಲೂ ಚಂದ್ರನೇ ಪ್ರಿಯ. ಹಾಗಾಗಿ ಸುದ್ದಿಗೋಷ್ಠಿ ಸಂಜೆಯೇ ಆಯೋಜನೆಯಾಗಿತ್ತು. ಔಪಚಾರಿಕ ಪತ್ರಿಕಾಗೋಷ್ಠಿ ಮುಗಿದಿದ್ದೇ ಅನೌಪಚಾರಿಕ ಪಾನಗೋಷ್ಠಿ. ಶಶಿ ಆಗಸದಲ್ಲಿ ಮೇಲಕ್ಕೆ ಏರುತ್ತಿದ್ದಂತೆಯೇ ಅಲ್ಲಿನ ಟೇಬಲ್ಲುಗಳ ಮೇಲಿನ ಬಣ್ಣದ ಲ್ಯಾಂಪುಗಳೂ ತಮ್ಮ ರಂಗನ್ನು ಏರಿಸಿಕೊಂಡವು. ಕುಂಡಗಳಲ್ಲಿನ ಗಿಡಗಳು ತೂಗಾಡುತ್ತಿರುವುದು ಮೆಲುವಾಗಿ ಬೀಸುತ್ತಿದ್ದ ಗಾಳಿಗೋ ಅಥವಾ ಅದರಲ್ಲಿ ಮದಿರೆಯ ಗುಂಗಿಗೋ ಸ್ಪಷ್ಟಮಾಡಿಕೊಳ್ಳುವಷ್ಟು ‘ಫಿಟ್’ ಆಗಿ ಯಾರೂ ಇರಲಿಲ್ಲ.

ಪತ್ರಕರ್ತರೊಟ್ಟಿಗೇ ಕೂತು ಊಟ ಮಾಡುತ್ತಿದ್ದ ಆ ಚಿತ್ರದ ನಿರ್ಮಾಪಕರು, ಅಲ್ಲಿಯೇ ನಡೆದುಹೋಗುತ್ತಿದ್ದ ನಾಯಕನಟಿಯನ್ನು ‘ಯೇ ಬಾರೆ ಇಲ್ಲಿ’ ಎಂದು ‘ಸ್ವಂತ’ದ ಭಾಷೆ ಬಳಸಿಯೇ ಕರೆದರು. ನಟಿ ಹಿಂಜರಿಯುತ್ತಲೇ ಬಂದು ಅವರ ಪಕ್ಕ ನಿಂತಳು. ಅವಳ ಕೈ ಹಿಡಿದೆಳೆದು ತಮ್ಮ ತೊಡೆಯ ಮೇಲೆ ಕೂಡಿಸಿಕೊಂಡರು. ಬೆನ್ನು ಸವರುತ್ತ ತಮ್ಮ ತಟ್ಟೆಯಲ್ಲಿನ ಚಿಕನ್ ತುಂಡನ್ನು ಎತ್ತಿಕೊಂಡು ಅವಳಿಗೆ ತಿನಿಸಹೋದರು. ಮೊದಲೇ ಹಿಂಜರಿಕೆಯಲ್ಲಿ ಮುದುಡಿಹೋಗಿದ್ದ ನಟಿ ‘ಬೇಡ’ ಎಂದಳು. ನಿರ್ಮಾಪಕರು, ಪತ್ರಕರ್ತರ ಕಡೆಗೆ ನೋಡುತ್ತ, ‘ನೋಡಿ ಸಾರ್, ಈಗ ಏನ್ ಗಾಂಚಾಲಿ ಮಾಡ್ತಾಳೆ... ನಿನ್ನೆ ಹಿಂಗೇ ತಿನ್ನಿದೀನಿ ಸಾರ್ ನಾನು ಇವ್ಳಿಗೆ... ಈಗ ತಿನ್ನಲ್ಲ ಅಂತಾಳೆ’ ಎಂದು ದೂರು ಹೇಳುವ ರೀತಿ ಹೇಳುತ್ತ ಒತ್ತಾಯ ಮಾಡಿ ತಿನ್ನಿಸಿಯೇ ಬಿಟ್ಟರು!

ಊಟದ ತಟ್ಟೆಯಲ್ಲಿನ ಚಿಕನ್ ತುಣುಕಿಗೂ, ಜೀವಂತ ಹೆಣ್ಣಿಗೂ ವ್ಯತ್ಯಾಸವೇ ಇಲ್ಲದ ಹಾಗೆ ವರ್ತಿಸುವ ಈ ಪರಿ, ‘ಆ ಕಾಲ’ದ್ದಷ್ಟೇ ಅಲ್ಲ, ಎಲ್ಲ ಕಾಲದಲ್ಲಿಯೂ ಚಿತ್ರರಂಗದ ಬಹುತೇಕ ‘ಗಣ್ಯ’ರು ಹೆಣ್ಣುಮಕ್ಕಳನ್ನು ನಡೆಸಿಕೊಳ್ಳುವ ರೀತಿಗೆ ಹಿಡಿದ ಕನ್ನಡಿ.

ಮತ್ತೊಂದು ಸಿನಿಮಾ ಚಿತ್ರೀಕರಣ ಸಂದರ್ಭದಲ್ಲಿ ಒಬ್ಬ ‘ದಿಲ್ದಾರ್ ಗಂಡು’ ಸ್ಟಾರ್ ನಟನೊಬ್ಬ ಅಂದು ಖ್ಯಾತರಾಗಿದ್ದ ಮೂವರು ಚಿತ್ರನಟಿಯರಿಗೆ ಒಂದೇ ಹೋಟೆಲ್‌ನಲ್ಲಿ ಅಪಕ್ಕಪಕ್ಕವೇ ರೂಮ್ ಮಾಡಿ ಇರಿಸಿಕೊಂಡಿದ್ದರಂತೆ! ಮನಸ್ಸಿಗೆ ಬಂದಾಗ ಮನಸ್ಸಿಗೆ ಬಂದ ರೂಮಿಗೆ ಹೋಗುವ ಸ್ವಾತಂತ್ರ್ಯ ಆ ನಟನದ್ದು!

ರಸಿಕ ನಟನೊಬ್ಬ ಪ್ರತಿದಿನ ಮುಂಜಾನೆ ತನ್ನ ಹಿಟ್ ಜೋಡಿಯಾದ ಸಂಗೀತ ನಿರ್ದೇಶಕರಿಗೆ, ‘ನಿನ್ನೆ ರಾತ್ರಿ ಯಾವ ನಟಿಯೊಂದಿಗೆ ಸುಖಿಸಿದೆ’ ಎಂಬುದನ್ನು ರಸವತ್ತಾಗಿ ವರ್ಣಿಸುತ್ತಿದ್ದ. ಈಗ ಬಿಡಿ, ಇಬ್ಬರಿಗೂ ವಯಸ್ಸಾಗಿದೆ. ಆದರೆ ಆ ಸಂಗೀತ ನಿರ್ದೇಶಕರು ತಮ್ಮ ಆಪ್ತವಲಯದಲ್ಲಿ ಈಗಲೂ ಆ ದಿನಗಳನ್ನು ನೆನಪಿಸಿಕೊಳ್ಳುತ್ತ, ‘ಅವನಿಗೆ ಬೆಡ್‌ಮೇಲೆ ಎಷ್ಟು ಸುಖ ಸಿಕ್ತಿತ್ತೋ ಇಲ್ವೋ ಗೊತ್ತಿಲ್ಲ; ಆದರೆ ಅದನ್ನು ನನ್ನ ಜೊತೆ ಹೇಳಿಕೊಳ್ಳುವಾಗಲೇ ಅದಕ್ಕಿಂತ ಹೆಚ್ಚು ಸುಖ ಸಿಕ್ತಿತ್ತು ಅನ್ನಿಸುತ್ತೆ’ ಎಂದು ನಗುತ್ತಾರೆ.

ಇನ್ನೊಂದು ಕಥೆ ಹೀಗಿದೆ: ಆ ನಟಿ ಚಿತ್ರೀಕರಣದುದ್ದಕ್ಕೂ ನಾಯಕನಟನ ‘ಕೈ’ಯಿಂದ ತಪ್ಪಿಸಿಕೊಂಡೇ ಇದ್ದಳು. ಅದಕ್ಕಾಗಿ ಅವಳು ಮಾಡಿದ್ದ ಹರಸಾಹಸಗಳು ಒಂದೆರಡಲ್ಲ. ತನ್ನ ಸಿನಿಮಾಗೆ ಅವಳು ನಾಯಕಿ ಎಂಬುದು ತಿಳಿದಾಗಲೇ ತುಟಿಯಂಚಲ್ಲಿ ಸುರಿದ ಜೊಲ್ಲನ್ನು ಹಾಗೆಯೇ ಸವರಿಕೊಂಡಿದ್ದ ಅವನಿಗೆ ಅವಳ ವರ್ತನೆಯಿಂದ ಒಳಗೊಳಗೇ ಬೆಂಕಿ. ಅದು ಚಿತ್ರೀಕರಣದ ಕೊನೆಯ ದಿನ. ಆ ನಟಿಯ ತಾಯಿ ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದರು. ನಿರ್ಮಾಪಕರಿಂದ ಬಾಕಿ ಹಣವನ್ನು ಪಡೆದುಕೊಂಡು ಹೋಗಿ ಆಸ್ಪತ್ರೆಯಲ್ಲಿ ಕಟ್ಟಬೇಕಿತ್ತು. ಆದರೆ ನಿರ್ಮಾಪಕರ ಮ್ಯಾನೇಜರ್ ಎಷ್ಟು ಹೊತ್ತಾದರೂ ಬಾಕಿ ಹಣ ಕೊಡುತ್ತಿಲ್ಲ. ಗಟ್ಟಿಯಾಗಿ ಕೇಳಿದಾಗ, ‘ತಾನು ಬರುವವರೆಗೂ ಹಣ ಕೊಡ್ಬೇಡಿ ಎಂದು ಹೀರೊ ಹೇಳಿದ್ದಾರೆ’ ಎಂಬ ಉತ್ತರ ಬಂತು. ನಾಯಕಿಯ ಎದೆ ದಿಗ್ ಅಂತು. ಅಷ್ಟರಲ್ಲಿಯೇ ಆ ಹೀರೊ ಬಂದ. ಆಗಿದ್ದಿಷ್ಟೆ:



